**ಸಿ.ಸಿ.ನಂಃ 388/18** **ಪಿ.ಡಬ್ಲ್ಯೂ-3**

ದಿನಾಂಕಃ 21.11.2025 ರಂದು ಪಿ.ಡಬ್ಲ್ಯೂ-3 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಟಿ ಎಸ್ ಎಸ್ ವಕೀಲರಿಂದಃ**

ಕಾಡ್ಲೂರು ಕೂಡಿಗೆಯಿಂದ ಐದೂರು ಎಷ್ಟು ಅಂತರ ಎಂದರೆ 2-3 ಕಿ.ಮೀ. ಆರೋಪಿ ಯಾವ ದಿಕ್ಕಿನ ಕಡೆ ಹೋಗುತ್ತಿದ್ದರು ಎಂದರೆ ಬಾಳ್ಳುಪೇಟೆಯಿಂದ ಕೆ ಹೊಸಕೋಟೆ. ಕಾಡ್ಲೂರು ಕೂಡಿಗೆಯಿಂದ ಐದೂರು ರಸ್ತೆ ಮತ್ತು ಬಾಳ್ಳುಪೇಟೆಯಿಂದ ಕೆ ಹೊಸಕೋಟೆ ರಸ್ತೆ ಬೇರೆ ಬೇರೆ ಎಂದರೆ ಸರಿಯಲ್ಲ. ಯಾವ ಸ್ಥಳದಲ್ಲಿ ಆರೋಪಿಯನ್ನು ನೋಡಿದ್ದೀರ ಎಂದರೆ ಕಾಡ್ಲೂರು ಕೂಡಿಗೆ. ಸದರಿ ಸ್ಥಳ 3 ರಸ್ತೆ ಕೂಡುತ್ತವೆ ಎಂದರೆ ಸರಿ. ಅಲ್ಲಿ ಅಂಗಡಿ ಮಳಿಗೆಗಳಿವೆ ಎಂದರೆ ಸರಿ. ಆರೋಪಿಯನ್ನು ಐದೂರು ಕಡೆಗೆ ಹೋಗುವ ರಸ್ತೆಯಲ್ಲಿ ನೋಡಿರುತ್ತೇವೆ. ಪ್ಲಾಸ್ಟಿಕ್ ಚೀಲವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಚೀಲವು ರಸ್ತೆಯ ಎಡಭಾಗದಲ್ಲಿತ್ತು. ಮೊದಲು ಚೀಲವನ್ನು ಯಾರು ತೆರೆದು ನೋಡಿರುತ್ತಾರೆ ಎಂದರೆ ಚಾಸಾ 4. ಮಹಜರ್ ನಲ್ಲಿ ಟೆಟ್ರಾ ಪ್ಯಾಕ್ ಗಳ ತಯಾರಿಕ ದಿನ ನಮೂದಿಸಿರುವುದಿಲ್ಲ. ಸ್ಥಳದಲ್ಲಿದ್ದ ಪಂಚರನ್ನು ಬರಮಾಡಿಕೊಂಡಿರುತ್ತೇವೆ. ಆರೋಪಿ ಯಾವುದೇ ಚೀಲವನ್ನು ಎಸೆದಿರುವುದಿಲ್ಲ ಮತ್ತು ಅದನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಮು.ಮಾ. 1 ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .